ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಘಾಯಿಷ್ ಆದ್ದು [ನಂ. 19.

ಬೆಂಗಳೂರು, ಗುರುವಾರ, ಮೇ ತಾ॥ 14, ಸ್ ೧೮೯೬.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ರು, ರಜಿಸ್ಟ್ರೇರ್ಷ ವ ಯುಡ್ಯುಕೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆರ್ಷ ಜಡ್ಜಿರರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿರರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ರು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇರ್ಷಗಳು.

4ನೇ ಭಾಗ—ಸರ್ಕಾರಿ ಕಾಗದ ಪತ್ರಗಳು.—ಇಲ್ಲ.

ಈ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 16ನೇ ಏಪ್ರೆಲ್ 1896.

ನಂ. ಸಿ. 160.—ಸ್ ೧೮೯೪ನೇ ಇಸವಿಯ ಮೈಸೂರ್ ಜೈಲ್ ಮ್ಯಾನ್ಯೂಯಲಿನ 86ನೇ ಪುಟದಲ್ಲಿ ಛಾಪಿಸಿರುವ 519ನೇ ರೂಲಿಗೆ ಬದಲಾಗಿ ಇದರಿಂದ ಕೆಂಡದ್ದನ್ನು ಸೇರಿಸತಕ್ಕದ್ದೆಂದು ಮೈಸೂರ್ ಗವರ್ಮೆಂಟಿನವರು ಹುಕುಂ ಮಾಡಿರುತ್ತಾರೆ:

"519. ಯಾವ ಖೈದಿಯಾಗಲಿ ಅಪಾಯಕರವಾದ ಯಾ ಗುಣವಾಗದ ಕಾಹಿಲೆಯಲ್ಲಿದ್ದು ಮತ್ತು ಅಂಥಾವನ ವಿಷಯದಲ್ಲಿ ಸದರೀ ಖೈದಿಯು ಖುಲಾಸೆ ಮಾಡಲ್ಪಟ್ಟ ಹೊರ್ತು ಅನ್ಯಥಾ ಬದುಕಲಾರನೆಂದು ಸದರೀ ಬಂದೀಖಾನೆಯ ಮೆಡಿಕಲ್ ಆಫಿಸರರು ಅಭಿಪ್ರಾಯ ಪಟ್ಟರೆ ಜೈಲ್ ಸೂಪರ್ಟೆಂಡೆಂಟಿಂವರು, ಗವರ್ಮೆಂಟ್ ಆರ್ಡರ್ ಅನುಸರಿಸಿ ಖುಲಾಸೆ ಮಾಡಲ್ಪಡುವ ಬಗ್ಯಾಗಿ ಬಂದೀಖಾನೆಯ ಇನ್‌ಸ್ಪೆಕ್ಟರ್ ಜನರಲ್‌ಯವರಿಗೆ ಶಿಫಾರಸು ಮಾಡಬಹುದು. ಇಂಥಾ ಸಂದರ್ಭಗಳಲ್ಲಿ ಜೈಲ್ ಸೂಪರ್ಟೆಂಡೆಂಟರವರು ಸದರೀ ಖೈದಿಯು ಬಂದೀಖಾನೆಯಲ್ಲಿರುವಾಗ್ಯೆ ಅಕ್ರಮವಾಸತೆಯುಳ್ಳವನಾಗಿರಲಿಲ್ಲವೆಂದು ದೃಢಪಡಿಸಬೇಕು ಮತ್ತು ಮೆಡಿಕಲ್ ಆಫಿಸರರು, ಸದರೀ ಖೈದಿಯ ಖುಲಾಸೆ ಬಗ್ಯಾಗಿ ಕಾರಣಭೂತವಾದ ಕಾಹಿಲೆಯು ಯಾವ ವಿಧದಿಂದಲಾಗಲಿ ಖೈದಿಯು ಮನಃಪೂರ್ವಕ ಮಾಡಿದ ಕೆಲಸದಿಂದ ಉಂಟಾಗಲಿಲ್ಲವೆಂತಲೂ ಆಥವಾ ಹೆಚ್ಚಾಗಲಿಲ್ಲವೆಂತಲೂ ಮತ್ತು ಸದರೀ ಖೈದಿಯು ಇನ್ನೂ ಬಂದೀಖಾನೆದಲ್ಲಿ ಯಿಡಲ್ಪಟ್ಟರೆ ಅವನ ಪ್ರಾಣಕ್ಕೆ ಅಪಾಯ ಉಂಟಾಗುವದೆಂತಲೂ ಮತ್ತು ಸದರೀಯವನು ಖುಲಾಸೆ ಮಾಡಲ್ಪಟ್ಟರೆ ಕಾಹಿಲೆಯು ಗುಣವಾಗಬಹುದೆಂತಲೂ ಸರ್ಟಿಫೈ ಮಾಡತಕ್ಕದ್ದು."

ತಾರೀಖು 18ನೇ ಏಪ್ರೆಲ್ 1896.

ನಂ. 11846.—ಎಂ. 1685, ಸ್ ೧೮೬೯ನೇ ಇಸವಿಯ ಜನರಲ್ ಸ್ಟಾಂಪ್ ಆಕ್ಟಿನ 48ನೇ ಸೆಕ್ಷನ್ ಅನುಸರಿಸಿ ಮೈಸೂರ್ ಗವರ್ಮೆಂಟಿನವರು, 1870ನೇ ಇಸವಿ ಸೆಪ್ಟಂಬರ್ 23ನೇ ಮತ್ತು 209ನೇ ನಂಬರ್‌ಉಳ್ಳ ಲೇಟ್ ಚೀಫ್ ಕಮ್ಮಿಷನರವರ ಇಸ್ತಿಹಾರ್‌ನಾಮೆಯೊಡನೆ ಪ್ರಕಟಿಸಲ್ಪಟ್ಟ Xನೇ ರೂಲನ್ನು ರದ್ದು ಮಾಡಿ ಇದರಿಂದ ಬರುವ ರೂಲನ್ನು ನಿರ್ಧರಿಸಿರುತ್ತಾರೆ:—

"ಪ್ರತಿಯಕ್ಸ್ ಆಫಿಷಿಯೋ ಅಥವಾ ಲೈಸೆನ್ಸ್ ಪಡೆದಿರುವ ಬಿಕರೀದಾರನುತಾನು ಬಿಕರಿಮಾಡುವ ಎರಡನೇ ಕ್ಲಾಸಿನ ಪ್ರತಿ ಸ್ಟ್ಯಾಂಪ್ ಕಾಗದದ ಹಿಂಭಾಗದಲ್ಲಿ ಜಂಜರ್ ನಂಬರ್, ಬಿಕರಿಯ ತಾರೀಖು, ಖರೀದಿಗೆ ಪಡೆದುಕೊಂಡವನ ಹೆಸರು ವ ವಾಸಸ್ಥಳ, ಮತ್ತು ಸದರೀ ಸ್ಟ್ಯಾಂಪು ಹಣ ಹಾಜರ್ಮಾಡಿದವನಲ್ಲದ ಇತರ ಬೇರೇ ಮನುಷ್ಯನಿಗೋಸ್ಕರ ಕೊಂಡುಕೊಳ್ಳಲ್ಪಟ್ಟರೆ ಅಂಥಾ ಇತರ ಮನುಷ್ಯನ ಹೆಸರು ವ ವಾಸಸ್ಥಳ ಮತ್ತು ಅಕ್ಷರದಲ್ಲಿ ಪೂರ್ತಿಯಾಗಿ ಸ್ಟ್ಯಾಂಪಿನ ಕಿಮ್ಮತ್ತು ಮತ್ತು ಅವನ ಸಾಧಾರಣವಾದ ರುಜು ಸಹ ಬರಿಯತಕ್ಕದ್ದು. ಲೋಕಲ್ ಗವರ್ಮೆಂಟಿನಿಂದ ವಿಧಿಸಲ್ಪಡಬಹುದಾದ. ನಮೂನೆಯಲ್ಲಿ ಪೊಂದು ರಿಜಿಸ್ಟರ್ ಬೀಟ್ಟು ಸದರೀ ರಿಜಿಸ್ಟರಿನಲ್ಲಿ ಈ ತಪಶೀಲುಗಳನ್ನು ಬರಿಯತಕ್ಕದ್ದು. ಅಂಥಾ ಯಾವ ಬಿಕರಿದಾರನಾಗಲಿ ಬಿಕರಿ ಮಾಡಲ್ಪಟ್ಟ ಸ್ಟ್ಯಾಂಪಿನ ಮೇಲೆ ತನಿಗೆ ತಿಳಿದು ಯಿದ್ದೂ ಕೂಡ ಸುಳ್ಳು ಯಿಂಡಾರ್ಸ್ಮೆಂಟನ್ನು ಮಾಡಕೂಡದು ಅಥವಾ ತನ್ನ ರಿಜಿಸ್ಟರಿನಲ್ಲಿ ಸುಳ್ಳು ಖತಾಯಿತಿಯನ್ನು ದಾಖಲ್ಮಾಡಕೂಡದು."

ತಾರೀಖು 5ನೇ ಮೇ 1896, ಬೆಂಗಳೂರು.

ನಂ. 12229.—ಜು. 1389,—ಮೈಸೂರ ಸರ್ವಿಸ್ ರೆಗ್ಯುಲೇಷ್ಟಗಳ 213ನೇ ಆರ್ಟಿಕಲ್ ಅನುಸರಿಸಿ, ಶಿವಮೊಗ್ಗಾ ಡಿಸ್ಟ್ರಿಕ್ಟ್ ಪೋಲೀಸ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಆರ್. ಬಿ. ಪ್ಲೂಮರ್ ಯವರಿಗೆ ಮಾಹೆ ಮಜಕೂರ್ 18ನೇ ಮರ್ತುಮಿನಲ್ಲಿ ನಡಿಯುವ ಕನ್ನಡ ಪರೀಕ್ಷೆಗೆ ಹಾಜರಾಗುವ ಬಗ್ಗಾಗಿ ಬೆಂಗಳೂರಿಗೆ ಹೊರಡುವದಕ್ಕೆ ಮಾಹೆ ಮಜಕೂರ್ 16ನೇ ಮರ್ತುಂ ಲಾಗಾಯತು 20ರ ವರಿಗೆ ನಾಲ್ಕು ದಿನಗಳ ರಜಾ ಕೊಡಲ್ಪಟ್ಟಿರುತ್ತೆ.

ನಂ. 12231.—ಜು. 1391,—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ, ತಿರುಮಕೂಡ್ಲು ನರಸೀಪುರ ತಾಲ್ಲೂಕು ಫಿರಸ್ತೇದಾರ್ ರಂಗಣ್ಣನವರು, ಅವರು ಸದರೀ ತಾಲ್ಲೂಕಿನ ಚಾರ್ಜಿನಲ್ಲಿರುವ ಕಾಲದಲ್ಲಿ ಒಬ್ಬ ಮೂರನೇ ಕ್ಲಾಸ್ ಮಾಜಿಸ್ಟ್ರೇಟರ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ತಾರೀಖು 14ನೇ ಮೇ 1896, ಬೆಂಗಳೂರು.

ನಂ. 12493—ಮಿ. 1808,—1896ನೇ ಮೇ 20ನೇ ಮರ್ತುಂ ಬುಧವಾರದ ದಿನ ಘನವನ್ನು ಹೊಂದಿದ ಶ್ರೀಮ್ಮ ಮಹಾರಾಜ್ಞೀ ಇಂಡಿಯಾ ಚಕ್ರವರ್ತಿನಿಯವರ ವರ್ಧಂತಿಯ ಮರ್ಯಾದಾರ್ಥವಾಗಿ ಸಂಸ್ಥಾನಾಮುಳಿ ದರೋಬಸ್ತು ಪಬ್ಲಿಕ್ ಆಫೀಸುಗಳೂ ಬರಖಾಸ್ತು ಮಾಡಲ್ಪಡತಕ್ಕದ್ದು.

ತಾರೀಖು 27ನೇ ಏಪ್ರೆಲ್ 1896, ಮೊಕ್ಕಾಂ ಮೈಸೂರ್.

ನಂ. 9608.—ರೆ. 3711,—ಮೈಸೂರ ಸರ್ವಿಸ್ ರೆಗ್ಯುಲೇಷ್ಟಗಳ 171ನೇ ಆರ್ಟಿಕಲ್ ಅನುಸರಿಸಿ, ಫ್ರೆಂಚ್‌ರಾಕ್ಸ್ ಸಬ್ ಡಿವಿಜ್ ಆಫಿಸರ್ ಮೆಸ್ಟರ್ ಪಿ. ಪಂಜನಾಥರಾಯರವರಿಗೆ, 1896ನೇ ಏಪ್ರೆಲ್ 3ನೇ ಮರ್ತುಂ ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 28ನೇ ಏಪ್ರೆಲ್ 1896, ಮೊಕ್ಕಾಂ ಮೈಸೂರ್.

ನಂ. 9603.—ರೆ. ಫೈ. 105—95,—ಮೈಸೂರ ಸರ್ವಿಸ್ ರೆಗ್ಯುಲೇಷ್ಟಗಳ 188ನೇ ಆರ್ಟಿಕಲ್ ಅನುಸರಿಸಿ, ಕೃಷ್ಣರಾಜಪೇಟೆ ಸಬ್ ತಾಲ್ಲೂಕ್ ಪಟ್ಟಣ ಅಮಲ್ದಾರ್ ಜಿ. ತಿರುನಾರಣಯ್ಯಂಗಾರ್ರಿಗೆ, 1896ನೇ ಏಪ್ರೆಲ್ 21ನೇ ಮರ್ತುಂ ಲಾಗಾಯತು ಪೊಂದೂ ವರೆ ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಸದರೀ ಸಬ್ ತಾಲ್ಲೂಕಿನ ಚಾರ್ಜಿಗಾಗಿ 1896ನೇ ಫಿಬ್ರವರಿ 21ನೇ ಮರ್ತುಂ 7500—2925ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಹುಕುಂ ಮಾಡಲ್ಪಟ್ಟ ಹಂಗಾಮಿ ಏರ್ಪಾಟ್ ಸದರಿ ತಿರುನಾರಣಯ್ಯಂಗಾರ್ರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ನಡೆಯತಕ್ಕದ್ದು.

ತಾರೀಖು 30ನೇ ಏಪ್ರೆಲ್ 1896, ಮೊಕ್ಕಾಂ ಮೈಸೂರ್.

ನಂ. 9683.—ರೆ. 3740,—ಇದರಡಿಕಂಡ ಗ್ರಾಮಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತವೆ:—

ಗ್ರಾಮದ ಹೆಸರು.	ಯಾವ ತಾಲ್ಲೂಕಿನಿಂದ.	ಯಾವ ತಾಲ್ಲೂಕಿಗೆ.
1. ಕೆಂಪನಪುರ ಗ್ರಾಮ (ಸರ್ವಮಾನ್ಯ)	ತಿರುಮಕೂಡ್ಲು ನರಸೀಪುರ	ಚಾಮರಾಜನಗರ
2. ಕನ್ನಗಾಲ ಗ್ರಾಮ (ಜೋಡಿ).	ಡಿಟೋ.	ಡಿಟೋ

ನಂ. 9684.—ರೆ. 3741,—ಕಾಯಂಗುತ್ತಾ ಮಾರಗೌಂಡನಹಳ್ಳಿ, ಕೃಷ್ಣಸಾಗರ ಗ್ರಾಮವನ್ನ ಕೃಷ್ಣರಾಜಪೇಟೆ ಸಬ್ ತಾಲ್ಲೂಕಿನಿಂದ ಪಂಗಳೂರು ತಾಲ್ಲೂಕಿಗೆ ವರ್ಗಾಯಿಸಿರುತ್ತೆ.

ತಾರೀಖು 3ನೇ ಮೇ 1896, ಮೊಕ್ಕಾಂ ಮೈಸೂರ್.

ನಂ. 9753.—ಫೈ. ಪೈ. 64—95,—ಮೈಸೂರ ಸರ್ವಿಸ್ ರೆಗ್ಯುಲೇಷ್ಟಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ಸುಗಳ ಅಸಿಸ್ಟೆಂಟ್ ಕಂಜರವೇಟರಿ ಮೆಸ್ಟರ್ ಎಂ. ವೆಂಕಟನಾರಣಪ್ಪನವರಿಗೆ, 1896ನೇ ಏಪ್ರೆಲ್ 14ನೇ ಮರ್ತುಮಿನಲ್ಲಿ ಪೊಂದು ದಿನದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 6ನೇ ಮೇ 1896, ಮೊಕ್ಕಾಂ ಮೈಸೂರ್.

ಕ್ಯಾಂಪ್ ನಂ. 259.—ಮೈಸೂರ ಸರ್ವಿಸ್ ರೆಗ್ಯುಲೇಷ್ಟಗಳ 171ನೇ ಆರ್ಟಿಕಲ್ ಅನುಸರಿಸಿ, ಫ್ರೆಂಚ್‌ರಾಕ್ಸ್ ಸಬ್ ಡಿವಿಜ್ ಆಫಿಸರ್ ಮೆಸ್ಟರ್ ಪಿ. ಪಂಚನಾಥರಾಯರವರಿಗೆ 1896ನೇ ಮೇ 7ನೇ ಮರ್ತುಂ ಲಾಗಾಯತು ಯಾ ಆವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜಿಬ್,

ಸಿ. ಶ್ರೀನಿವಾಸಯ್ಯಂಗಾರ್ ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ಮೆಂಟ್ ಸೆಕ್ರಿಟರಿ.